'ಮಾಂಕು, ತುಂಬ ದಿನಗಳಿಂದ ಮಂಡಿ ನೋವು. ಇವತ್ತು ವಾಸಿ ಆಗಬಹುದು, ನಾಳೆ ವಾಸಿ ಆಗಬಹುದು ಎಂದು ಇಷ್ಟೂ ದಿನ ಕಾದೆ. ಇನ್ನು ಇದು ಗುಣ ಆಗುವ ಹಾಗೆ ಕಾಣುವುದಿಲ್ಲ. ಹೇಗೂ ನೀನು ಬಂದಿದ್ದಿ. ನನ್ನ ಮಂಡಿಗೆ ಎಣ್ಣೆ ಹಾಕಿ ಸ್ವಲ್ಪ ಉಜ್ಜುತ್ತೀಯಾ?' ಕೇಳಿದೆ. ಇದಕ್ಕೇ ಕಾದಿದ್ದವನಂತೆ, 'ಆಗಲಿ, ಅದಕ್ಕೇನು? ಅಕ್ಕನವರ ಕಾಲಿಗೆ ಎಣ್ಣೆ ಹಚ್ಚುವುದೂ ಒಂದು ಭಾಗ್ಯ' ಎಂದ. ಮನೆಯಲ್ಲಿದ್ದ ಯಾವುದೋ ಒಂದು ನೋವಿನೆಣ್ಣೆಯನ್ನು ಅವನ ಮುಂದೆ ಹಿಡಿದು ಸೀರೆ ಮೇಲೆತ್ತಿ ಕಟ್ಟಿ ಮಂಡಿ ಮುಂದೆ ಮಾಡಿ ಕೂತೆ. ದೇವರ ಪಾದ ಮುಟ್ಟುವಂತೆ ಭಯಭಕ್ತಿಯಿಂದ ಕಾಲಿಗೆ ಎಣ್ಣೆ ಮೆತ್ತಿ ನೀವುತ್ತ ಹೇಳಿದ, 'ಅಕ್ಕಾವ್ರೇ ತಲೆಬಿಸಿ ಮಾಡಬೇಡಿ. ಇದಕ್ಕಿಂತ ಹೆಚ್ಚು ಬೇನೆ ಇರುವವರನ್ನು ಗುಣ ಪಡಿಸಿದ್ದೇನೆ. ನೋಡುತ್ತಾ ಇರಿ. ನೀವು ಮರ ಹತ್ತುವ ಹಾಗೆ ಮಾಡುತ್ತೇನೆ'. ನೋವು ತಡೆಯಲಾರದೆ ನಾನು, 'ನನ್ನನ್ನು ಮರ ಹತ್ತಿಸುವುದು ಬೇಡ ಮಾರಾಯ. ಮನೆಯೊಳಗೆ ನಡೆಯುವ ಹಾಗೆ ಮಾಡಿದ್ರೆ ಸಾಕು ನೀನು' ಎಂದೆ. ಹೋಗುವಾಗ ಅವನಿಗೆ ಬೀಡಿ ತೆಗೆಯಲು ಎಂದು 20 ರೂಪಾಯಿ ಕೊಟ್ಟೆ. 'ಬರೀ ಬೀಡಿ ತೆಗೆದರೆ ಸಾಕೆ? ಅದನ್ನು ಉರಿಸಲು ಬೆಂಕಿಪೆಟ್ಟಿಗೆಯೂ ಬೇಡವೇ? ಇನ್ನು 10 ರೂಪಾಯಿ ಕೊಡಿ' ಕೈನೀಡಿದ. 10 ರೂ. ತೆಗೆದು ಕೊಟ್ಟೆ. 'ಒಂದು ಸಲ ಉಜ್ಜಿದರೆ ನೋವು ಹೋಗಲಿಕ್ಕಿಲ್ಲ. ನೋವು ಪೂರ್ತಿ ಹೋಗಬೇಕಾದರೆ 4–5 ಬಾರಿ ಆದರೂ ಉಜ್ಜಬೇಕು' ಹೇಳಿ ಹೋದ.

ಮರುದಿನ ಮತ್ತೆ ಬಂದ. ನನಗೆ ಅವನ ಮೇಲೆ ಕನಿಕರ ಹುಟ್ಟಿ ಈ ಸಾರಿ ಎಣ್ಣೆ ಮಾಲೀಸು ಮಾಡಿದ್ದಕ್ಕೆ ಅವನಿಗೆ 60 ರೂಪಾಯಿ ಕೊಟ್ಟೆ. ಕೈಯಲ್ಲಿ ಹಿಡಿದು ಅದನ್ನೇ ನೋಡುತ್ತಾ ನಿಂತ. ಮೆಲ್ಲನೆ ಹೇಳಿದ– 'ಇನ್ನು 40 ರೂಪಾಯಿ ಕೊಡಿ. ನಾಳೆ ನೀವು ದುಡ್ಡು ಕೊಡುವುದು ಬೇಡ'. 'ಯಾಕೆ?' ಪ್ರಶ್ನಿಸಿದೆ. 'ಮತ್ತೇನಿಲ್ಲ. ತೊಟ್ಟೆ ಕುಡಿಯಬೇಕಾದರೆ ಕಲ್ಲುಗುಂಡಿಗೇ ಹೋಗಬೇಕು. ಆದರೆ, ನಮ್ಮೂರಲ್ಲಿ ಕಲ್ಲುಗುಂಡಿಯಿಂದ 60 ರೂಪಾಯಿಗೆ ತೊಟ್ಟೆ ತಂದು 100 ರೂಪಾಯಿಗೆ ಮಾರುವವ ಒಬ್ಬ ಇದ್ದಾನೆ. ಅವನಿಗೆ 100 ರೂ. ಕೊಟ್ಟರೂ ತೊಂದರೆಯೇನಿಲ್ಲ. ಕಲ್ಲುಗುಂಡಿಗೆ ಹೋಗಬೇಕಾದರೆ ಅದರಿಂದ ಹೆಚ್ಚು ಖರ್ಚಾಗುತ್ತದೆ' ಎಂದ. 'ಸರಿಯಪ್ಪ' ಎಂದು ಅವನಿಗೆ 40

